(ಈ ಹಂತದಲ್ಲಿ BJP ಹಾಗೂ KGP ಪಕ್ಷದ ಶಾಸಕರು ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)

(ಗೊಂದಲ)

ಅಧ್ಯಕ್ಷರು: ಆಯಿತು. ನಿಮಗೆ ಚರ್ಚೆಗೆ ಬೇರೆ ವಿಚಾರ ಇಲ್ಲವಾ? ಒಬ್ಬ ಹಿರಿಯ ಸದಸ್ಯರಾಗಿ ಮಾರ್ಗದರ್ಶನ ಮಾಡುವುದು ಬಿಟ್ಟು ನೀವು ಹೀಗೆಲ್ಲಾ ಮಾತನಾಡುವುದಾ? ಅವರು ಏನು ಹೇಳಬೇಕೋ ಅದನ್ನು ಹೇಳಿದ್ದಾರೆ, ನಿಮಗೆ ತಿಳಿದಿದ್ದನ್ನು ನೀವು ಹೇಳಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುತ್ತಿಲ್ಲ, ಒಂದು ನಿಮಿಷ ಅವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಹಲವಾರು ವಿಷಯಗಳ ಬಗ್ಗೆ ಸದನದಲ್ಲಿ ಬೆಳಕು ಚೆಲ್ಲಿದ್ದಾರೆ. ಹಲವಾರು ವಿಷಯಗಳಲ್ಲಿ ರೈತರಿಗೆ ಕೇಂದ್ರ ಸರ್ಕಾರದವರು ಯಾವ ಒಂದು ಬೆಂಬಲ ಬೆಲೆ ನಿಗದಿ ಮಾಡಿದ್ದಾರೆ, ಅದರ ಜೊತೆಗೆ ಪ್ರೋತ್ಸಾಹ ಧನದ ರೀತಿಯಲ್ಲಿ ತಾವು ಭತ್ತಕ್ಕೆ 280 ರಿಂದ 290 ರೂಪಾಯಿಗಳಂತೆ ಘೋಷಣೆ ಮಾಡಿದ್ದೀರಿ, ಅದು ಉತ್ತಮವಾದ ಕೆಲಸ ಆದರೆ ಒಂದು ನಾನು ನಿಮ್ಮಲ್ಲಿ ಮನವಿ ಮಾಡುವುದು, ಕೆಲವು ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಏನು ಪತ್ರ ಬರೆದಿದ್ದಾರೆ, ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಯತಕ್ಕಂತಹ ವಿಷಯದಲ್ಲಿ ಬಹುಶ ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯವರು ಹಾಗೂ ಮಾನ್ಯ ಚಿದಂಬರಂರವರು ಅಲ್ಲಿರತಕ್ಕಂತಹ ಪರಿಸ್ಥಿತಿಯಲ್ಲಿ ಯಾವ ರೀತಿಯಲ್ಲಿ ಸ್ಪಂದಿಸುತ್ತಾರೆಂದು ನನಗೆ ಗೊತ್ತಿಲ್ಲ. ಮಾನ್ಯ ಚಿದಂಬರಂವರಿಗೂ ತಾವು ಮನವಿ ಸಲ್ಲಿಸಿದ್ದೀರಿ.

ಅಧ್ಯಕ್ಷರು: ಆಯಿತು, ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗೋಣ.